GOVERNMENT OF KARNATAKA
(DRUGS CONTROL DEPARTMENT)
ಪರೀಕ್ಷಾ ಪ್ರಾಧಿಕಾರ ಮಂಡಳಿ (ಡಿ.ಫಾರ್ಮ), ಬೆಂಗಳೂರು
BOARD OF EXAMINING AUTHORITY (D.PHARM)
C/o Government College of Pharmacy, No. 2, 3rd Floor, P Kalingarao Road, Subbaiah Circle, Bangalore-27
email: bea.dcd-ka@nic.in, beadpharmacy@yahoo.com Phone : 080- 22483465, 080- 22223466
website: www.beadpharmacy.org

ಸಂಖ್ಯೆ: ಔನಿಇ/ಪಪ್ರಾಮಂ/ಆವಿ/01/2022–23 ದಿನಾಂಕ: 14/09/2022

**ಸುತ್ತೋಲೆ**

ವಿಷಯ: ವಿದ್ಯಾರ್ಥಿಗಳಿಗೆ ವಿತರಿಸುವ ಉತ್ತರಪತ್ರಿಕೆಗಳಲ್ಲಿನ ಬಾರ್‌ಕೋಡ್(BAR CODE) ವಿವರಗಳನ್ನು ಮಂಡಳಿಯ ವೆಬ್‌ಪೋರ್ಟಲ್‌ನಲ್ಲಿ ನಮೂದಿಸುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾರ್ಚ್ 2022ರಲ್ಲಿ ನಡೆಸಲಾಗಿದ್ದ ಡಿ.ಫಾರ್ಮ ಭಾಗ–1ರ ಪರೀಕ್ಷೆಯ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಡಿಜಿಟಲ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ. ಸದರಿ ಪರೀಕ್ಷೆಯಲ್ಲಿ ಹಲವು ವಿದ್ಯಾರ್ಥಿಗಳು ಉತ್ತರಪತ್ರಿಕೆಗಳಲ್ಲಿ ನಿಖರವಾದ ನೋಂದಣಿ ಸಂಖ್ಯೆಗಳನ್ನು ನಮೂದಿಸಿ, ಓ.ಎಂ.ಆರ್.ಶೀಟ್‌ನಲ್ಲಿ ವೃತ್ತಗಳನ್ನು ಸರಿಯಾಗಿ ಗುರುತಿಸದ ಕಾರಣ ಫಲಿತಾಂಶ ಪ್ರಕಟಿಸುವಲ್ಲಿ ವಿಳಂಬವಾಗುತ್ತಿದೆ.

ಫಲಿತಾಂಶ ಪ್ರಕಟಣೆಯಲ್ಲಿನ ವಿಳಂಬತೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ದಿನಾಂಕ 15.09.2022ರಿಂದ ಅನ್ವಯವಾಗುವಂತೆ ಸೆಪ್ಟೆಂಬರ್–2022ರ ಡಿ.ಫಾರ್ಮ ಭಾಗ–2ರ ವಾರ್ಷಿಕ ಪರೀಕ್ಷೆ ಬರೆಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಪ್ರತಿದಿನ ವಿತರಿಸುವ ಉತ್ತರ ಪತ್ರಿಕೆಗಳ QR ಕ್ರಮಸಂಖ್ಯೆಗಳ ವಿವರಗಳನ್ನು ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಮಂಡಳಿಯ ವೆಬ್‌ಪೋರ್ಟಲ್‌ನಲ್ಲಿ ತಮ್ಮ ಪರೀಕ್ಷಾ ಕೇಂದ್ರಕ್ಕೆ ಒದಗಿಸಿರುವ Login Credentials ಮೂಲಕ ಕೊಠಡಿ ಮೇಲ್ವಿಚಾರಕರ(Invigilator Diary)ದಿನಚರಿಯೊಂದಿಗೆ ತುಲನೆ ಮಾಡಿ, ನಿಗದಿತ ಕಾಲಾವಧಿಯೊಳಗೆ ಆನ್‌ಲೈನ್ ಮೂಲಕ ಭರ್ತಿಮಾಡಿ, ಅದರ ಕ್ರೋಢಿಕೃತ (Consolidate)ವಿವರಗಳನ್ನು ಮುದ್ರಿಸಿ(Print), ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಸಹಿಪಡೆದು, ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಂದ ದೃಢೀಕರಿಸಿ, ಅದನ್ನು ಕೊಠಡಿ ಮೇಲ್ವಿಚಾರಕರ(Invigilator

Diary)ದಿನಚರಿಯೊಂದಿಗೆ ತಪ್ಪದೇ ಮಂಡಳಿಗೆ ಕಳುಹಿಸಲು ಕ್ರಮಕೈಗೊಳ್ಳಬೇಕೆಂದು ಸೂಚಿಸಿದೆ. ಈ ಸಂಬಂಧದ ಕೈಪಿಡಿ/ವಿವರಗಳು ಪೋರ್ಟಲ್‌ನಲ್ಲಿ ಲಭ್ಯವಿದ್ದು, ತಮ್ಮ ಪರೀಕ್ಷಾ ಕೇಂದ್ರದ ಲಾಗಿನ್‌ನಲ್ಲಿ ಪಡೆಯಬಹುದಾಗಿದೆ.

ಮುಂದುವರೆಸುತ್ತಾ, ದಿನಾಂಕ 12.09.2022ರಿಂದ 14.09.2022ರವರೆಗೆ ನಡೆದ ಪರೀಕ್ಷೆಗಳಲ್ಲಿ ಹಾಜರಾಗಿರುವ ವಿದ್ಯಾರ್ಥಿಗಳ ಉತ್ತರಪತ್ರಿಕೆಗಳ QR ಕ್ರಮಸಂಖ್ಯೆಗಳ ವಿವರಗಳನ್ನು ಪರೀಕ್ಷಾ ಕೇಂದ್ರದಲ್ಲಿನ ಕೊಠಡಿ ಮೇಲ್ವಿಚಾರಕರ(Invigilator Diary)ದಿನಚರಿಯೊಂದಿಗೆ ತುಲನೆ ಮಾಡಿ(ವಿದ್ಯಾರ್ಥಿಗಳ ಸಹಿ ಇಲ್ಲದಿದ್ದಾಗ್ಯೂ) ತಮ್ಮ ಪರೀಕ್ಷಾ ಕೇಂದ್ರಕ್ಕೆ ಒದಗಿಸಿರುವ Login Credentialsನ್ನು ಬಳಸಿ ಮಂಡಳಿಯ ವೆಬ್‌ಪೋರ್ಟಲ್‌ನಲ್ಲಿ ನಮೂದಿಸಿ, ಭೌತಿಕ ಪ್ರತಿಯನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಂದ ದೃಢೀಕರಿಸಿ, ದಿನಾಂಕ 17.09.2022ರೊಳಗೆ ತಪ್ಪದೇ ಮಂಡಳಿಗೆ ಕಳುಹಿಸಿಕೊಡಲು ಈ ಮೂಲಕ ಸೂಚಿಸಲಾಗಿದೆ.

**(ಡಾ. ಅಮರೇಶ್ ತುಂಬಗಿ)**
ಅಪರ ಔಷಧ ನಿಯಂತ್ರಕರು &
ಸದಸ್ಯ ಕಾರ್ಯದರ್ಶಿಗಳು(ಪ್ರ),
ಪರೀಕ್ಷಾ ಪ್ರಾಧಿಕಾರ ಮಂಡಳಿ,
ಬೆಂಗಳೂರು.

**ಗೆ,**
ಸೆಪ್ಟೆಂಬರ್-2022ರ ಡಿ.ಫಾರ್ಮ ಭಾಗ-2ರ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರಿಗೆ

ಪ್ರತಿಯನ್ನು,
ಮಾನ್ಯ ಔಷಧ ನಿಯಂತ್ರಕರು, ಕರ್ನಾಟಕ ರಾಜ್ಯ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.